**ಶ್ರೀಮತಿ ವೀಣಾ ಅಚ್ಚಯ್ಯ, ಮಾನ್ಯವಿಧಾನಪರಿಷತ್ ನಸದಸ್ಯರು ಇವರ ಗಮನ ಸೆಳೆಯುವ ಸೂಚನೆ ನಿಯಮ-72ಕ್ಕೆಉತ್ತರಿಸುವಬಗ್ಗೆ.**

**ವಿಷಯ:**

ಕೊಡಗು ಜಿಲ್ಲೆಯಲ್ಲಿ ವಾಸವಾಗಿರುವ ಕೊಡವ ಸಮುದಾಯದ ಬಹು ವರ್ಷಗಳ ಬೇಡಿಕೆಯನ್ನು ಮನ್ನಿಸಿ, ಕರ್ನಾಟಕ ಘನ ಸರ್ಕಾರವು ಸಮಾಜ ಕಲ್ಯಾಣ ಇಲಾಖೆ ಮೂಲಕ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ಇವರಿಗೆ ಕೊಡವರ ಕುಲಶಾಸ್ತ್ರೀಯ ಅಧ್ಯಯನ ಮಾಡುವ ಮೂಲಕ ಕೊಡವರು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಪಟ್ಟಿಗೆ ಸೇರಲು ಅರ್ಹರೇ? ಎಂಬ ಬಗ್ಗೆ ವರದಿ ನೀಡುವಂತೆ ನಿರ್ದೇಶನ ನೀಡಲಾಗಿತ್ತು.

ಆದರೆ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ಇದರ ನಿರ್ದೇಶಕರು ತಮ್ಮ ಇಚ್ಛೆಗೆ ತಕ್ಕಂತೆ ಮಾದರಿ ಪ್ರಶ್ನಾವಳಿಯನ್ನು ತಯಾರಿಸಿಕೊಂಡು, ಕೊಡವರು ಸಾಮಾಜಿಕ, ಶೈಕ್ಷಣಿಕ ಮತ್ತುಆರ್ಥಿಕವಾಗಿ ಸ್ಥಿತಿವಂತರು ಎಂದು ಬಿಂಬಿಸಲು ಹೊರಟಿದ್ದಾರೆ.

ಸದರಿ ಸಂಸ್ಥೆಯ ನಿರ್ದೇಶಕರಾಗಿ ಸಾಮಾಜಿಕ ನ್ಯಾಯದ ಉದ್ದೇಶಗಳಿಗೆ ವಿರುದ್ಧವಾಗಿ ನಡೆದುಕೊಳ್ಳುವುದರ ಜೊತೆಗೆ ಪೂರ್ವಗ್ರಹಪೀಡಿತರಾಗಿ ಕೊಡವರ ನ್ಯಾಯಯುತ ಬೇಡಿಕೆಯನ್ನು ದಿಕುತಪ್ಪಿಸಲು ಹೊರಟಿರುವ ನಿರ್ದೇಶಕರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಹಾಗೂ ಸಾಮಾಜಿಕ ನ್ಯಾಯದ ಪರ ಇರುವ ಬೇರೊಬ್ಬರನ್ನು ಸದರಿ ಸಂಸ್ಥೆಯ ನಿರ್ದೇಶಕರಾಗಿ ನೇಮಿಸಿ, ಕೊಡವ ಕುಲಶಾಸ್ತ್ರೀಯ ಅಧ್ಯಯನ ವರದಿಯನ್ನು ಪಡೆದು "ದೇಶ ರಕ್ಷಣೆಗಾಗಿಯೇ ಜನ್ಮವೆತ್ತ ಕೊಡವ ಸಮುದಾಯ"ಕ್ಕೆ ಸೂಕ್ತ ನ್ಯಾಯ ಒದಗಿಸುವ ಸಂಬಂಧ **ಮಾನ್ಯ ಉಪ ಮುಖ್ಯಮಂತ್ರಿಯವರು ಹಾಗೂ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಸಚಿವರ ಗಮನ ಸೆಳೆಯಬಯಸುತ್ತೇನೆ.**

**ಉತ್ತರ:**

ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ಇವರ ವತಿಯಿಂದ ಕೊಡಗು ಜಿಲ್ಲೆಯ ಕೊಡವ ಸಮುದಾಯದ ಕುಲಶಾಸ್ತ್ರೀಯ ಅಧ್ಯಯನ ಕಾರ್ಯವನ್ನು ಕೈಗೊಳ್ಳಲು ಆದೇಶ ಸಂಖ್ಯೆ ಸಕಇ 229 ಎಸ್‌ಎಡಿ 2016, ದಿನಾಂಕ: 01/12/2016 ರಲ್ಲಿ ಆದೇಶಿಸಲಾಗಿದೆ. ಈ ಕೆಳಕಂಡ 05 ಅಂಶಗಳನ್ನು ಅಧ್ಯಯನದಲ್ಲಿ ಅಳವಡಿಸಿಕೊಂಡು ಅಂತಿಮ ವರದಿಯನ್ನು ಸಲ್ಲಿಸಲು ಆದೇಶಿಸಲಾಗಿದೆ.

| | | |
|---|---|---|
| 1. Indication of Primitive Traits | - | ಆದಿಕಾಲದಗುಣಲಕ್ಷಣಗಳು: |
| 2. Distinctive Culture | - | ಭಿನ್ನವಾದಸಂಸ್ಕೃತಿ |
| 3. Geographical Isolation | - | ಪ್ರತ್ಯೇಕವಾದಭೌಗೋಳಿಕತೆ |
| 4. Shyness of contact with the community at large | - | ಹೊರಪ್ರಪಂಚದ ಅಂಜಿಕೆಮತ್ತುನಾಚಿಕೆ |
| 5. Backwardness | - | ಹಿಂದುಳಿಯುವಿಕೆ |

ಅದರಂತೆ ಕೊಡಗು ಜಿಲ್ಲೆಯ ಕೊಡವ ಸಮುದಾಯದ ಕುಲಶಾಸ್ತ್ರೀಯ ಅಧ್ಯಯನ ಕಾರ್ಯವನ್ನು ಕೈಗೊಳ್ಳಲಾಗಿದೆ. ಸದರಿ ಕುಲಶಾಸ್ತ್ರೀಯ ಅಧ್ಯಯನ ಕಾರ್ಯದಲ್ಲಿ ಮಾನವಶಾಸ್ತ್ರದ ಸಂಶೋಧನಾ ವಿಧಾನಗಳನ್ನು ಸಮರ್ಪಕವಾಗಿ ಅಳವಡಿಸಿಕೊಂಡು ಪ್ರಶ್ನಾವಳಿ ಮತ್ತು ನಮೂನೆಗಳನ್ನು ಸಿದ್ಧಪಡಿಸಿ ಕ್ಷೇತ್ರಕಾರ್ಯ ಕೈಗೊಳ್ಳಲಾಗಿದೆ. ಆದರೆ ಕೊಡಗು ಜಿಲ್ಲೆಯಲ್ಲಿ ಕೆಲವರು ಅಧ್ಯಯನ ಕಾರ್ಯಕ್ಕೆ ವಿರೋಧ ವ್ಯಕ್ತಪಡಿಸಿದ ಹಿನ್ನಲೆಯಲ್ಲಿ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು. ತದನಂತರ 2018ರಲ್ಲಿ ಕುಲಶಾಸ್ತ್ರೀಯ ಅಧ್ಯಯನವನ್ನು ಮುಂದುವರೆಸಲಾಗಿದ್ದು, ಪ್ರಸ್ತುತ ಕ್ಷೇತ್ರ ಕಾರ್ಯ ಪೂರ್ಣಗೊಂಡಿದ್ದು, ಕರಡು ವರದಿ ತಯಾರಿಸುವ ಹಂತದಲ್ಲಿರುತ್ತದೆ.

ಕ್ಷೇತ್ರ ಅಧ್ಯಯನ (Intensive Fieldwork) ಕಾರ್ಯದ ಅವಧಿಯಲ್ಲಿ ಕೊಡವ ಸಮುದಾಯದ ಮುಖಂಡರ ಮತ್ತು ಅವರ ಸಂಘ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಅಧ್ಯಯನ ಕುರಿತಂತೆ ಕಾಲಕಾಲಕ್ಕೆ ಚರ್ಚಿಸಿ, ಕುಲಶಾಸ್ತ್ರೀಯ ಅಧ್ಯಯನ ವಿಷಯವನ್ನು ಅವರಿಗೆ ಮನನ ಮಾಡಿಕೊಟ್ಟು ನಂತರವೇ ಕ್ಷೇತ್ರಾಧ್ಯಯನ ಕಾರ್ಯವನ್ನು ಅಂತಿಮಗೊಳಿಸಲಾಗಿದೆ.

ಕೊಡವ ಸಮುದಾಯದ ಕುಲಶಾಸ್ತ್ರೀಯ ಅಧ್ಯಯನದ ಅಂತಿಮ ವರದಿಯನ್ನು ಕ್ಷೇತ್ರಕಾರ್ಯ ಸಮಯದಲ್ಲಿ ಸಂಗ್ರಹಿಸಿರುವ ದಾಖಲೆಗಳು, ಮಾಹಿತಿಗಳು ಹಾಗೂ ಮಾನವ ಶಾಸ್ತ್ರಜ್ಞರನ್ನು ಒಳಗೊಂಡ ತಜ್ಞ ಸದಸ್ಯರ ಸಮಿತಿಯ ಸಲಹೆ/ಅಭಿಪ್ರಾಯಗಳನ್ನು ಒಳಗೊಂಡಂತೆ ಸಿದ್ಧಪಡಿಸಬೇಕಾಗಿದೆ. ಆದ್ದರಿಂದ, ನಿರ್ದೇಶಕರ ವೈಯಕ್ತಿಕ ಪೂರ್ವಾಗ್ರಹ ಪೀಡಿತ ಅಭಿಪ್ರಾಯಕ್ಕೆ ಅವಕಾಶ ಇರುವುದಿಲ್ಲ. ಸದರಿ ಅಂತಿಮ ವರದಿ ಬಂದ ನಂತರ ನಿಯಮಾನುಸಾರ ಪಾರದರ್ಶಕವಾಗಿ ಪರಿಶೀಲಿಸಿ ಮುಂದಿನ ಸೂಕ್ತ ಕ್ರಮ ಜರುಗಿಸಲಾಗುವುದು.

ಸಕಇ 61 ಎಸ್ಎಡಿ 2020

(ಗೋವಿಂದ ಎಂ. ಕಾರಜೋಳ)

ಉಪ ಮುಖ್ಯ ಮಂತ್ರಿಗಳು
ಹಾಗೂ ಲೋಕೋಪಯೋಗಿ
ಮತ್ತು ಸಮಾಜ ಕಲ್ಯಾಣ ಸಚಿವರು.